# ಆಧುನಿಕೋತ್ತರ ಚಿಂತನೆಗಳು: ಎದೆಯ ಹಣತೆ

**ಸವಿತಾ ಗು ಕೊಟಬಾಗಿ**

ಸಹಾಯಕ ಪ್ರಾಧ್ಯಾಪಕರು, ಶ್ರೀ ಶರಣ ನುಲಿಯ ಚಂದಯ್ಯ ಡಾ. ಬಿ.ಆರ್ ಅಂಬೇಡ್ಕರ್ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, ಹುಬ್ಬಳ್ಳಿ.

**DOI: https://doi.org/10.5281/zenodo.18701294**

## ABSTRACT:

ಬಾನು ಮುಸ್ತಾಕ್ ಅವರ 'ಎದೆ ಹಣತೆ' ಕಥಾ ಸಂಕಲನವು ಆಧುನಿಕೋತ್ತರ ಸಮಸ್ಯೆಗಳ ಕುರಿತು ಅನಾವರಣ ಮಾಡುತ್ತದೆ. ಜೊತೆಗೆ ಪರ್ಯಾಯ ವ್ಯವಸ್ಥೆ ರೂಪಿಸಬೇಕೆಂಬ ಸೂಕ್ಷ್ಮತೆಯ ಸುಳಿವುಗಳನ್ನು ನೀಡುತ್ತದೆ. ಈ ದೃಷ್ಟಿಕೋನದಲ್ಲಿ ವ್ಯಕ್ತಿಯ ಅಂತರಂಗ, ಸಾಮಾಜಿಕ ಭಿನ್ನತೆ, ಗುರುತರ ನೋವು, ದುಃಖ–ದುಮ್ಮಾನಗಳು ವಿಭಿನ್ನ ರೀತಿಯಾಗಿ ವಿಶ್ಲೇಷಣೆಗೆ ಬಾನು ಅವರು ಒಳಪಡಿಸಿದ್ದಾರೆ. ಈ ಕಥಾ ಸಂಕಲನದ ಕೆಲ ಮುಗ್ಧ ಸ್ತ್ರೀ ಪಾತ್ರಗಳು ಸಾಂಪ್ರದಾಯಿಕ ಮೌಲ್ಯಗಳಿಂದಾಗಿ, ಲೋಕ ಜ್ಞಾನದ ಕೊರತೆಯಿಂದಾಗಿ ಜೀವನ ಕಳೆದುಕೊಂಡಿದ್ದರೆ, ಇನ್ನೂ ಕೆಲ ವಿದ್ಯಾವಂತ ಸ್ತ್ರೀ ಪಾತ್ರಗಳು ಅಂಥ ಸಾಂಪ್ರದಾಯಿಕ ಮೌಲ್ಯಗಳನ್ನು, ಮೂಲಭೂತಿವಾದಿಗಳನ್ನು ಪ್ರಶ್ನಿಸುತ್ತಾರೆ.

ಈ ಕಥಾ ಸಂಕಲನವು ಕ್ರಮಬದ್ಧವಲ್ಲದ ತುಂಡು ತುಂಡಾದ ರಚನೆಗಳು, ಸರಳ ಭಾಷಾ ಸಂವಹನ ಅಭಿವ್ಯಕ್ತಿಯಲ್ಲಿ ಸಂಕೀರ್ಣತೆಗಳು ಮತ್ತು ಅಂತರಶಿಸ್ತೀಯ ವಿಷಯಗಳನ್ನು ಒಳಗೊಂಡಿದೆ. ಇದರಿಂದ ವ್ಯಕ್ತಿಯ ಮಾನಸಿಕ ಸಂಘರ್ಷ ಮತ್ತು ಸಮಾಜ ಅಸ್ಥಿರತೆಯನ್ನು ಸೂಚಿಸುತ್ತದೆ. ಕಥೆಗಳ ರಚನೆಯಲ್ಲಿ ಹಲವು ವಿನೂತನ ತಂತ್ರ ಶೈಲಿಗಳನ್ನೊಳಗೊಂಡಿದ್ದರಿಂದ ಸಹೃದಯರನ್ನು ಓದಿಸಿಕೊಂಡು ಹೋಗುತ್ತವೆ. ಕಲ್ಪನಾ ಹಂದರದಲ್ಲಿ ಪಾತ್ರಗಳು ರಚನೆಯಾದರೂ ಅವುಗಳು ವಾಸ್ತವಕ್ಕೆ ಮುಖಾಮುಖಿಯಾಗಿವೆ. ಪ್ರಸ್ತುತ ಕಥೆಗಳಲ್ಲಿ ಹೆಚ್ಚು ಕಥೆಗಳು ಮುಸ್ಲಿಂ ಸಮುದಾಯದ ಬಡತನ, ಅಲ್ಲಿಯ ಲಿಂಗ ತಾರತಮ್ಯಗಳಂತಹ ವಿಶಿಷ್ಟ ಅನುಭವಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಗಿದೆ. ಜೊತೆಗೆ ತೀರಾ ಕೆಳ ಅಂಚಿನ ಜನರ ದುರ್ಗಮ ನೋವು–ನಿರಾಶೆ–ಸಂಕಟಗಳನ್ನೂ ದಾಖಲಿಸುತ್ತದೆ. ಇಂತಹ ವಿಶಿಷ್ಟ ಅನುಭವ ಲೋಕ ಹಾಗೂ ಕಥಾ ರಚನೆಯ ಶೈಲಿಯ ಆಧುನಿಕೋತ್ತರ ಕಥೆಗಳ ಪ್ರಮುಖ ಲಕ್ಷಣವಾಗಿವೆ.

ಪ್ರಸ್ತುತ ಕಥಾ ಸಂಕಲನದ ಕಥೆಗಳಲ್ಲಿ ಒಂದೇ ಸತ್ಯದ ಹಲವು ಅನುಭವಗಳು (ಸತ್ಯ ಅನಿಶ್ಚಿತತೆ), ಸ್ತ್ರೀ ಅಸ್ಮಿತೆ ಮತ್ತು ಅಸ್ತಿತ್ವಕ್ಕಾಗಿ ನೋವುಗಳು, ಕೆಳಸ್ತರ ವ್ಯಕ್ತಿಗಳ ಆರ್ತಧ್ವನಿ ಇತ್ಯಾದಿ ವಿಷಯಗಳ ಕುರಿತು ಶೋಧಿಸಲಾಗಿದೆ. ಈ ಕೃತಿ ಸಮಕಾಲೀನ ಮಾನವನ ವಿವಿಧ ಅನುಭವ ಸ್ತರಗಳ ಸ್ವರೂಪಗಳನ್ನು ಅಭಿವ್ಯಕ್ತಿಸುತ್ತದೆ. ಒಟ್ಟಿಗೆ ಪರ್ಯಾಯ ವ್ಯವಸ್ಥೆ ರೂಪಿಸಬೇಕೆಂಬ ಹಕ್ಕೊತ್ತಾಯದ ಸೂಕ್ಷ್ಮತೆಯನ್ನು ಕಥೆಗಳಲ್ಲಿ ಲೇಖಕಿ ಪ್ರತಿಪಾದಿಸಿರುವುದನ್ನು ಗುರುತಿಸಲಾಗಿದೆ.

## KEYWORDS:

ಮುಸ್ಲಿಂ ಸಂವೇದನೆ, ಸತ್ಯದ ಅನಿಶ್ಚಿತತೆ, ಕೆಳಸ್ತರದ ಸ್ತ್ರೀ ಅನುಭವ.

**ಪೀಠಿಕೆ:** ಸಮಕಾಲೀನ ಕನ್ನಡ ಸಾಹಿತ್ಯವು ಆದರ್ಶ, ವಾಸ್ತವ ಹಾಗೂ ಮಾನಸಿಕ ವಿಶ್ಲೇಷಣೆಗಳಿಗಿಂತ ಭಿನ್ನವಾದ ಜನಾನುಭವದ ಕ್ಲಿಷ್ಟತೆ ಸಂಕೀರ್ಣತೆಗಳಲ್ಲಿ ಒಂದೇ ಸತ್ಯದ ಮೌಲ್ಯವು ಹಲವು ಅನುಭವಗಳನ್ನೊಳಗೊಂಡ ರೂಪಗೊಂಡಿರುವ ಚಿಂತನೆಯಾಗಿದೆ. ಅನುಭವಾಧಾರಿತ ಅರ್ಥಗಳು ಪ್ರಧಾನವಾಗಿರುವ ಮುಖ್ಯ ಚಳುವಳಿಯಾಗಿದೆ. ಅಂದು ಮೌಲ್ಯಗಳನ್ನು, ಮೌಲ್ಯಗಳ ಸ್ಥಿರತೆಯನ್ನು ಪ್ರಶ್ನಿಸುವ, ಅದರ ಹಿಂದಿರುವ ಕಾರಣಗಳನ್ನು ಭೇದಿಸುವ ಹಾಗೂ ಒಂದು ನೈಜ ಘಟನೆ ಸತ್ಯಕ್ಕೆ ಸ್ಪಂದಿಸಿ ನೂರಾರು ಅನುಭವಗಳನ್ನು ದಾಖಲಿಸುವ ಪ್ರಕ್ರಿಯೆ ಆಧುನಿಕೋತ್ತರ ಸಾಹಿತ್ಯದ ಕಾರ್ಯ ನಿರ್ವಹಿಸುತ್ತದೆ. ಹೀಗೆ ಹೊಸ ಅರ್ಥವ್ಯಾಪ್ತಿ ಹೊಂದುತ್ತಿರುವ ಆಧುನಿಕೋತ್ತರ ಸಾಹಿತ್ಯದ ಚಿಂತನೆಗಳನ್ನು ಶೋಧಿಸಲು ಬಾನು ಮುಸ್ತಾಕ್ ಅವರ 'ಎದೆ ಹಣತೆ' ಕಥಾ ಸಂಕಲನ ಅಧ್ಯಯನಕ್ಕೊಳಪಡಿಸಲಾಗಿದೆ.

ಪ್ರಸ್ತುತ ಕಥಾ ಸಂಕಲನದಲ್ಲಿ ಕಥೆಗಾರ್ತಿ ಸಾಂಪ್ರದಾಯಿಕ ಮೌಲ್ಯ ವ್ಯವಸ್ಥೆಗಳ ಪುನರ್ ವಿಮರ್ಶೆಗೆ ಒಳಗಾಗುವ ಮಹತ್ವದ ಕಾರ್ಯ ಕೈಗೊಂಡಿದ್ದಾರೆ. ವಿಶೇಷವಾಗಿ ಸತ್ಯದ ಅನಿಶ್ಚಿತತೆ, ಅಸ್ಮಿತೆ ಮತ್ತು ಅಸ್ತಿತ್ವದ ನೋವು, ಕೆಳಸ್ತರ ಬದುಕಿನಲ್ಲಿ ಹೆಣ್ಣು ಅನುಭವಿಸಿದ ಹೃದಯ ವಿದ್ರಾವಕ ಪ್ರಸಂಗಗಳನ್ನು ಅತ್ಯಂತ ಸಶಕ್ತವಾಗಿ ಅನಾವರಣ ಮಾಡಿದ್ದಾರೆ. ಪ್ರತಿ ಕಥೆಗಳಲ್ಲಿಯ ಸ್ತ್ರೀ ಪಾತ್ರಗಳು ಬರ್ಬರ ಸಂಕಟ, ವೇದನೆ, ಅಸಹಾಯಕತೆ, ನಿರಾಶೆಗಳನ್ನು ಅನುಭವಿಸಿದ್ದರೂ ನೇತ್ಯಾತ್ಮಕ ಬದುಕಿಗೆ ತನ್ನನ್ನು ತಾನು ಆತ್ಮಾಹುತಿಗೆ ಎಡೆಮಾಡಿಕೊಳ್ಳುವ ಪಾತ್ರಗಳು ತೀರಾ ಕಡಿಮೆ ಇದ್ದರೂ; ಭರವಸೆಯ ಬೆಳಕಿನ ಕಡೆ ಚಲಿಸುವ, ಇತ್ಯಾತ್ಮಕ ದೃಷ್ಟಿಯಿಂದ ತನ್ನೊಳಗೆ ಮಹಾಬೆಳಗನ್ನು ಕಂಡು, ಸಶಕ್ತತೆಯತ್ತ ಹೆಜ್ಜೆಯಿಡುವ ತೀರ್ಮಾನಗಳೇ 'ಎದೆ ಹಣತೆ' ಆಗಿದೆ. ಧರ್ಮ, ವರ್ಗ, ವರ್ಣಗಳಂತಹ ಮಹಾ ತಮಂಧದಲ್ಲಿ ಹೆಣ್ಣು ತನ್ನೊಳಗಿನ ಅರಿವಿನ ದೀಪದಿಂದ ಮಾತ್ರ ತನ್ನ ಅಸ್ಮಿತೆ-ಅಸ್ತಿತ್ವಗಳನ್ನು ಕಟ್ಟಿಕೊಳ್ಳಬಹುದು. ಯಾವ ಧರ್ಮ, ಯಾವ ಶ್ರೀಮಂತರೂ ಮಹಿಳೆಯರ ಅಸ್ತಿತ್ವಯಾನದ ಆತ್ಮ ಸನ್ಮಾನದ ಯಾತ್ರೆಗೆ ಸಹಾಯಕ ಸಹಚರರು ಆಗಲಾರರು ಎಂಬ ಸತ್ಯದ ಸೂಕ್ಷ್ಮತೆಯನ್ನು 'ಎದೆ ಹಣತೆ' ಅನಾವರಣ ಮಾಡಿದೆ.

ಪ್ರಕೃತಿ ವೈವಿಧ್ಯಮಯ ವಿಷಯ, ವಸ್ತು, ರೂಪ, ವಾಸನೆಗಳ ಆಗರ. ಇದು ಸೃಷ್ಟಿ ಸಹಜ ಪ್ರಕ್ರಿಯೆ. ಇಂತಹ ಸಹಜ ವ್ಯಾಪಾರಗಳು ಮಾನವನ ಬದುಕಿನಲ್ಲಿದ್ದರೂ ಸಹ ಹೆಣ್ಣಿನ ವಿಷಯದಲ್ಲಿ ಮಾತ್ರ ಹಲವು ತರಹದ ಸೀಮೆಗಳಿಂದ ಬಂಧಿಸಲ್ಪಡುತ್ತವೆ. ಮಾನವ ನಿರ್ಮಿತ ಧರ್ಮದ ಕಟ್ಟುಪಾಡುಗಳು, ವಿಧಿ-ನಿಷೇಧಗಳೆಲ್ಲವೂ ಹೆಣ್ಣಿನ ದೇಹದ ಅಪೇಕ್ಷಿತ ನೆಲೆಯಲ್ಲಿ ರಚನೆಗೊಂಡು; ಹೆಣ್ಣನ್ನು ಅಧೀನದ ನೆಲೆಯಲ್ಲಿ ಬದುಕುವಂತೆ ಮಾಡಿದ್ದು ತುಂಬಾ ಅಪಾಯ. ಏಕೆಂದರೆ ಹೆಣ್ಣಿನ ಆಂತರ್ಯ ಆನಂದದ ಅನುಭವದ ನೆಲೆಗಳನ್ನು ದಕ್ಕದಂತೆ ಪ್ರಜ್ಞಾಪೂರ್ವಕವಾಗಿ ವ್ಯವಸ್ಥೆ ರೂಪಿಸಲಾಗಿದೆ. ಹೀಗಾಗಿ ಹೆಣ್ಣುಮಗಳು ತನ್ನ ಆತ್ಮಾಭಿಮಾನಕ್ಕಾಗಿ, ಆತ್ಮ ಸನ್ಮಾನಕ್ಕಾಗಿ ಸೆಣಸಾಡುವಂತ ಅನಾರೋಗ್ಯ ವಾತಾವರಣ ಸೃಷ್ಟಿಗೊಂಡಿದ್ದು ಪ್ರಕೃತಿ ಸಹಜ ಗುಣವಲ್ಲ. ಇಂತಹ ಅಸಹಜ ಗುಣಗಳಿಂದ ಹಾಗೂ ಮೂಲಭೂತವಾದಿಗಳ ವರ್ತನೆಗಳ ದೆಸೆಯಿಂದಾಗಿ ಹಲವು ತರಹದ ನೋವುಗಳಿಂದ ಜರ್ಜರಿತರಾಗಿಯೂ ಬದುಕುವ ಹಂಬಲವನ್ನುಳಿಸಿಕೊಂಡು ತಮ್ಮ ಅಸ್ತಿತ್ವಕ್ಕಾಗಿ ಬದುಕು ಕಟ್ಟಿಕೊಳ್ಳಲು ತೀರ್ಮಾನಿಸುವ ಮಹಿಳೆಯರನ್ನು ಬಾನು ಮುಸ್ತಾಕ್ ಅವರು 'ಎದೆ ಹಣತೆ' ಕಥಾ ಸಂಕಲನದಲ್ಲಿ ರಚಿಸಿದ್ದು ಗಮನಾರ್ಹ ಸಂಗತಿ.

'ಎದೆ ಹಣತೆ' ಕಥಾ ಸಂಕಲನ 2004 ರಲ್ಲಿ ಮೊದಲ ಮುದ್ರಣಗೊಂಡಿದೆ. ಈ ಕಥಾ ಸಂಕಲನದಲ್ಲಿ ಏಳು ಕಥೆಗಳು ಹೆಣ್ಣಿನ ವಿವಿಧ ನೋವುಗಳನ್ನು, ಅದರ ಪರಿಹಾರಗಳ

ಪ್ರಾಯೋಗಿಕತೆಯ ಪ್ರಯತ್ನವನ್ನು ಬಾನು ಮುಸ್ತಾಕ್ ಅವರು ನೀಡಿದ್ದಾರೆ. ಈ ಏಳು ಕಥೆಗಳಲ್ಲಿ ಆಧುನಿಕೋತ್ತರ ಚಿಂತನೆಗಳನ್ನು ಶೋಧಿಸುವುದೇ ಈ ಲೇಖನದ ಉದ್ದೇಶ. 'ಎದೆ ಹಣತೆ' ಕಥಾ ಸಂಕಲನದಲ್ಲಿ ಆಧುನಿಕೋತ್ತರ ಚಿಂತನೆಗಳಾದ ಕೆಳಸ್ತರದ ಆರ್ತಧ್ವನಿ, ಅಸ್ತಿತ್ವದ-ಅಸ್ಮಿತೆಯ ನೋವುಗಳು, ಸತ್ಯದ ಅನಿಶ್ಚಿತತೆ ಈ ಮುಂತಾದ ವಿಷಯಗಳು ತುಂಬಾ ಪ್ರಬಲವಾಗಿ ಚಿತ್ರಿತಗೊಂಡಿವೆ.

**ಕೆಳಸ್ತರ ವ್ಯಕ್ತಿಗಳ ಆರ್ತಧ್ವನಿ:**

ದಮನಿತ ವರ್ಗದ ಶೋಷಣೆಗಳ ದಾಖಲೆ ಆಧುನಿಕೋತ್ತರ ಸಾಹಿತ್ಯ ಪ್ರಕಾರಗಳಲ್ಲಿ ವ್ಯಾಪಕವಾಗಿ ನಡೆಯುತ್ತಿದೆ. ಅವರ ಶೋಷಣೆಗಳಿಗೆ ಕಾರಣ ಶೋಧ ಮತ್ತು ಪರಿಹಾರಗಳ ಮಾರ್ಗಸೂಚಿ ಅಗತ್ಯವಾಗಿ ರೂಪಿಸಬೇಕಾಗಿದೆ. ಸಮಾಜ ಸಮುದಾಯಗಳು ಪರಿಷ್ಕರಣೆಗೊಳಪಡಿಸಿ ಪರ್ಯಾಯ ವ್ಯವಸ್ಥೆ ರೂಪಿಸುವುದು ಅತ್ಯಂತ ತುರ್ತಾಗಿದೆ. ಈ ಕಾರಣದಿಂದ ಪ್ರಸ್ತುತ ಕಥಾಸಂಕಲನ ಅತ್ಯಂತ ಮಹತ್ವ ಸ್ಥಾನ ಪಡೆದಿದೆ. 'ಎದೆ ಹಣತೆ' ಕಥಾಸಂಕಲನದಲ್ಲಿ ಬರುವ ಪಾತ್ರಗಳು ಸಾಮಾನ್ಯ ಹಾಗೂ ದಟ್ಟ ದರಿದ್ರ ಬಡತನದ ಅಸಹಾಯಕತೆಗಳಿಂದ ನರಳಿವೆ. ಹೀಗೆ ಬಡತನ ಹಾಗೂ ಕೆಳ ಅಂಚಿನಲ್ಲಿರುವ ಸ್ತ್ರೀ ಪಾತ್ರಗಳು ಕಥೆಗಳ ಕೇಂದ್ರವಾಗುತ್ತಾರೆ. ಅನಕ್ಷರತೆ, ಬಡತನ ಹಾಗೂ ಧರ್ಮದ ನಿರ್ಬಂಧಗಳಿಂದಾಗಿ ಮೌನವಾಗಿ ಅನುಭವಿಸಿದ ರೋಧನಗಳು ಮಾತುಗಳಾಗಿ ಹೊರಹೊಮ್ಮಿವೆ. ಕೆಲವೊಮ್ಮೆ ಘೋಷಾ ಪದ್ಧತಿಯ ಪರಿಣಾಮವಾಗಿ ಲೋಕಾನುಭವಗಳಿಂದ ವಂಚಿತಳಾಗಿ, ಬದುಕುವ ಕೌಶಲ್ಯಗಳಿಂದ ಅನನುಭವಿಯಾಗಿದ್ದ ಕಾರಣ ಬದುಕಿಗೆ ತಿಲಾಂಜಲಿ ಹೇಳಿದ 'ಜೀವ ಸೆಲೆ' ಕಥೆಯ ಅಬಿದಾ. ಅಬಿದಾ ಬಡ ಮುಸ್ಲಿಂ ಸಮುದಾಯದ ಅಜ್ಞಾನ, ಘೋಷಾ ಪದ್ಧತಿ, ಸಂತಾನ ಹಾಗೂ ಕಾಮುಕ ಗಂಡಸರ ದೃಷ್ಟಿಕೋನಗಳಿಂದ ಬಲಿಯಾದ ಹೆಣ್ಣುಮಗಳು.

ಅಬಿದಾಳ ಗಂಡ ಲಾರಿ ಡ್ರೈವರ್, ಈತ ತಂದೆಯಿಲ್ಲದ ಮಗ. ತಾಯಿಗೆ ಊರುಗೋಲಾಗಿದ್ದ ಮಗ. ಹೆಂಡತಿಯನ್ನು ಹೊರ ಪ್ರಪಂಚಕ್ಕೆ ಪರಿಚಯಿಸದ ಘೋಷಾದಲ್ಲಿಟ್ಟು; ತನ್ನ ಭೋಗದ ವಸ್ತುವನ್ನಾಗಿ ಕಂಡವ. ಇಷ್ಟೆಲ್ಲ ಅವನ ವಿಶೇಷ ಗುಣಗಳಾಗಿದ್ದರೂ ಕುಟುಂಬ, ಹೆಂಡತಿ ಮಕ್ಕಳೆಂದರೆ ಪಂಚಪ್ರಾಣ. ದುಡಿದ ದುಡ್ಡಿನಲ್ಲಿ ಉಳಿತಾಯವಿಲ್ಲ. ಆಹಾರದ ಕೊರತೆ ಮನೆ ಮಂದಿಗಿಲ್ಲ. ಇಷ್ಟು ಚೆನ್ನಾಗಿ ನಿರ್ವಹಿಸುತ್ತಿದ್ದ ಸಿರಾಜ್ ಐದು ಮಕ್ಕಳ ತಂದೆ. ಆದರೆ ಆರನೆಯ ಮಗು ಗರ್ಭದಲ್ಲಿದ್ದಾಗ ದುರ್ಮರಣಕ್ಕೆ ಬಲಿಯಾಗುತ್ತಾನೆ. ಅಬಿದಾಳಿಗೆ ಒಂದು ಕಡೆ ಗಂಡನನ್ನು ಕಳೆದುಕೊಂಡ ನೋವು ಇನ್ನೊಂದು ಕಡೆ ಬಾಣಂತನದ ನೋವು-ಸಂಕಟಗಳು. ಸಿರಾಜನ ಮರಣದ ನಂತರ ಕಾರ್ಯಗಳನ್ನು ಆತನ ತಾಯಿ ಮತ್ತು ಅಬಿದಾ ಅವರು ಮನೆಯ ಅಡುಗೆ ಮಾಡುವ ಮತ್ತು ನಿತ್ಯ ದಿನ ಉಪಯೋಗಿಯ ಸಾಮಗ್ರಿಗಳ ಮಾರಿ ಮುಗಿಸಿದರು. ಅನಕ್ಷರಸ್ಥಳಾದ ಅಬಿದಾ ಕುಟುಂಬ ನಿರ್ವಹಣೆಗೆ ಬೇರೆಯವರ ಮನೆಗಳಿಗೆ ಕೆಲಸಕ್ಕೆ ಸೇರಿದರೂ ಆಕೆಯ ಸೌಂದರ್ಯವೇ ಆಕೆಗೆ ಮುಳುವಾಯಿತು. ಸಿಕ್ಕ ಕೆಲಸವೂ ದಕ್ಕುವುದಿಲ್ಲ. ಬಾಡಿಗೆ ಮನೆಯವರೂ ಮನೆ ಬಿಡಿಸುತ್ತಾರೆ. ಊರ ಶ್ರೀಮಂತ ಖುದ್ವಾನನ ಕಾಮುಕ ದೃಷ್ಟಿಕೋನದಿಂದಾಗಿ ಆಕೆಯ ಕುಟುಂಬಕ್ಕೆ ಸಹಾಯವೇನೋ ಆಗುತ್ತದೆ. ಆದರೆ ಆಕೆ ತನ್ನನ್ನು ಆತನಿಗೆ ಒಪ್ಪಿಸಿಕೊಳ್ಳದೆ ಗಂಡನ ಖಬರಸ್ತಾನಕ್ಕೆ ಮಧ್ಯರಾತ್ರಿ ಹೋಗುತ್ತಾಳೆ. ಈ ರೀತಿ ಅನಕ್ಷರತೆ, ಸಮುದಾಯದ ಅಜ್ಞಾನ ಹಾಗೂ ಘೋಷಾ ಪದ್ಧತಿಗಳಿಂದಾಗಿ ಅಬಿದಾ ಜೀವ ಕಳೆದುಕೊಳ್ಳುವಂಥ ಮುಗ್ಧ ಮಹಿಳೆಯಾಗಿ ಕಂಡು ಬರುತ್ತಾಳೆ.

ಇಂತಹ ಸಂದಿಗ್ಧತೆ, ಕಾಠಿಣ್ಯ ಸ್ಥಿತಿಗಳನ್ನು 'ಒಮ್ಮೆ ಹೆಣ್ಣಾಗು ಪ್ರಭುವೇ!' ಹಾಗೂ 'ಎದೆ ಹಣತೆ' ಕಥೆಗಳು ಅನಾವರಣ ಮಾಡುತ್ತವೆ. ಈ ಕಥೆಗಳಲ್ಲಿ ಬಡತನವಿಲ್ಲ. ಶೋಷಾ ಪದ್ಧತಿ ಇದೆ. ಜೊತೆಗೆ ಮೂಲಭೂತವಾದಿ ಗಂಡಸರ ಕ್ರೌರ್ಯ ಹಾಗೂ ಹೆಣ್ಣಿನ ಆತ್ಮ ಸನ್ಮಾನದ ದಾರಿ ದುರ್ಗಮವಾಗಿದೆ. 'ಒಮ್ಮೆ ಹೆಣ್ಣಾಗು ಪ್ರಭುವೇ!' ಕಥೆ ಹೆಣ್ಣಿನ ಮನಸ್ಸಿನ ತಳಮಳಗಳನ್ನು ಅಭಿವ್ಯಕ್ತಿಸುತ್ತದೆ. ಹೆಣ್ಣು ಕೇವಲ ಭೋಗದ ವಸ್ತು ಹಾಗೂ ಹೆರುವ ಯಂತ್ರ ಮಾತ್ರವಾಗಿದ್ದಾಳೆ. ಗಂಡಿನ ಕ್ರೌರ್ಯಕ್ಕೆ ಹೆಣ್ಣು ಕೇವಲ ಮೌನವಾಗಿ ಮಾನಸಿಕ ರೋಧನದ ತೀವ್ರತೆ ಅತ್ಯಧಿಕವಾಗಿದ್ದರೂ ಸಹನೆ ಮೀರಿ ಪ್ರತಿರೋಧದ ಧ್ವನಿ ಎತ್ತದೆ ಅಸಹಾಯಕತೆಯಿಂದ ದೇವರಲ್ಲಿ ಪ್ರಾರ್ಥನೆ ಮಾಡುತ್ತಾಳೆ. ಕೌಟುಂಬಿಕ ವ್ಯವಸ್ಥೆಯಲ್ಲಿ ಹೆಣ್ಣಿಗೆ ಪ್ರಶ್ನೆ ಮಾಡುವ ಹಕ್ಕು ಇಲ್ಲ; ಜೊತೆಗೆ ತನ್ನ ಇಚ್ಛೆ ಆಸೆ-ಆಕಾಂಕ್ಷೆಗಳನ್ನು ಗಂಡ-ಅತ್ತೆ-ಮಾವ ಮುಂತಾದ ಮನೆ ಸದಸ್ಯರ ಜೊತೆಗೆ ಹಂಚಿಕೊಳ್ಳದಷ್ಟು ಬಿಗಿ ಭದ್ರತೆಯಿಂದ ಕೂಡಿತ್ತು. ಗಂಡಿಗೆ ಲೋಕವ್ಯವಹಾರಕ್ಕಿಂತ ತನ್ನ ಮೂಗಿನ ನೇರಕ್ಕೆ ನಡೆಯಬೇಕೆಂಬುದೇ ಬಹುಮುಖ್ಯ. ತವರಿನಿಂದ ಆತ ಕೇಳಿದಾಗ ಹಣ ತರದೇ ಇರುವದಕ್ಕೆ ರಕ್ತ ಸಂಬಂಧವನ್ನು ಕಳಚಿದ ಅಹಂ ಪ್ರವೃತ್ತಿಯ ಅಜ್ಞಾನಿಯಾಗಿದ್ದನು. ಮನೆಯಲ್ಲಿ ತನ್ನ ಗಂಡನ ದೆಸೆಯಿಂದಾಗಿ ಕ್ರೌರ್ಯವನ್ನು ಅನುಭವಿಸಿದರೂ ತನ್ನ ಗಂಡನನ್ನು ಪ್ರತಿರೋಧಿಸದೆ ದೇವರಲ್ಲಿ ಮೊರೆ ಹೋಗುತ್ತಾಳೆ. ಇಲ್ಲಿ ಹೆಣ್ಣು ಮಗಳು ಕುಟುಂಬ ಬಂಧನದಲ್ಲಿದ್ದರೂ ಸಿದ್ಧ ಮಾದರಿಯ ವ್ಯವಸ್ಥೆಯನ್ನು ಒಪ್ಪಿಕೊಂಡಿದ್ದಾಳೆ ಹೊರತು ಅದನ್ನು ಮುರಿದು ಕಟ್ಟುವ ಲೋಕಜ್ಞಾನವಾಗಲಿ, ಧೈರ್ಯಗಾರಿಕೆಯಾಗಲಿ ಇಲ್ಲ. ಎಲ್ಲ ಕಥೆಗಳಂತೆ ಇಲ್ಲಿ ಹೆಣ್ಣು ಕೇವಲ ಭೋಗದ ವಸ್ತುವಾಗಿದ್ದಾಳೆ.

'ಎದೆ ಹಣತೆ' ಕಥೆ ಮಧ್ಯಮ ವರ್ಗದ ಮುಸ್ಲಿಂ ಸಮುದಾಯದಲ್ಲಿ ಹೆಣ್ಣು ಅನುಭವಿಸಿದ ಯಾತನೆ ಕಂಡುಬರುತ್ತದೆ. ಇಲ್ಲಿ ಹೆಣ್ಣು ಮಗಳನ್ನು ದ್ವಿತೀಯ ವರ್ಗದ ಕಾರ್ಮಿಕಳನ್ನಾಗಿ ಮಾಡುತ್ತದೆ. ಸ್ತ್ರೀ ದೇಹದ ಶೋಷಣೆ ಜೊತೆಗೆ ಅನೈತಿಕ ಸಂಬಂಧದ ಅಸಹನೆಯಿಂದಾಗಿ ಕಥಾ ನಾಯಕಿ ಪಟ್ಟಭದ್ರ ಹಿತಾಸಕ್ತಿಯ ಆಶಯಗಳನ್ನು ಪ್ರಶ್ನಿಸುವ ವೈಚಾರಿಕ ಪ್ರಜ್ಞೆ ಹೊಂದಿರುತ್ತಾಳೆ. ಕಥಾ ನಾಯಕಿ ಮೆಹರುನ್ ವಿದ್ಯಾವಂತೆ. ಪಿಯುಸಿ ತನಕ ಓದಿದ ಮಹಿಳೆ. "ತನಗಾಗುತ್ತಿರುವ ಅನ್ಯಾಯವನ್ನು ಎದುರಿಸಬೇಕೆನ್ನುವ ವ್ಯಕ್ತಿತ್ವದ ಅರಿವಿನ ಹೆಣ್ಣು ಮಗಳು. ಆದರೆ ಆಕೆಯ ಪ್ರತಿಭಟನೆಯನ್ನು ಮೊದಲ ಹಂತದಲ್ಲಿಯೇ ಸಂಬಂಧಗಳ ಭಾವನಾತ್ಮಕ ಹಿನ್ನೆಲೆಯಲ್ಲಿ ಶಕ್ತವಾಗಿ ಹತ್ತಿಕ್ಕಲಾಗುತ್ತದೆ. ಗಂಡನನ್ನು ಕುರಿತ ಇವಳ ಆರೋಪಗಳನ್ನು ಯಾವ ಸಂಕೋಚವಿಲ್ಲದೆ ಒಪ್ಪಿಕೊಂಡು, ಅದು ಗಂಡಿನ ವ್ಯಕ್ತಿತ್ವದ ಮೂಲಧಾತು ಎಂಬ ಸರ್ಟಿಫಿಕೇಟನ್ನು ಕೊಟ್ಟು ಅವಳನ್ನು ವಾಪಸ್ಸು ಗಂಡನ ಮನೆಗೆ ಬಿಟ್ಟು ಬರುತ್ತಾರೆ. ಆದರೆ ವಿದ್ಯಾವಂತಳಾದ ಮೆಹರುನ್ ತನಗಾಗುತ್ತಿರುವುದು ಅನ್ಯಾಯ ಎನ್ನುವ ಸ್ಪಷ್ಟ ತಿಳುವಳಿಕೆಯಿದೆ."1(ಎದೆಯ ಹಣತೆ -ಆಶಾದೇವಿ). ಆದರೆ ಸಂಬಂಧಗಳ ಮೌಲ್ಯಗಳಲ್ಲಿ ಸಿಲುಕಿ ತನ್ನ ಪತಿ ಅನೈತಿಕ ಸಂಬಂಧವನ್ನು ಸಹಿಸದೆ ತನ್ನ ಬದುಕನ್ನು ಬೆಂಕಿಗೆ ಆಹುತಿ ಮಾಡಿಕೊಳ್ಳಲು ಸಿದ್ಧಳಾದ ಮೆಹರುನ್ ಳ ಕಾಲುಗಳನ್ನು ಮಗಳು ಸಲ್ಮಾ ಬಿಗಿದಪ್ಪಿ" ಅಮ್ಮಿ... ಅವರೊಬ್ಬರನ್ನು ಕಳೆದುಕೊಂಡ ರೋಷದಲ್ಲಿ ನಮ್ಮೆಲ್ಲರನ್ನೂ ಅವಳ ಕಾಲ ಬುಡಕ್ಕೆ ಎಸೆಯುವುದು ಸರಿಯಾ? ಅಬ್ಬಗೋಸ್ಕರ ಸಾಯಲು ಸಿದ್ಧಳಾಗಿರುವ ನೀನು ನಮಗಾಗಿ ಬದುಕಲು ಸಾಧ್ಯವಿಲ್ಲವೇ? ನಮ್ಮನ್ನೆಲ್ಲಾ ನೀನು ಹೇಗೆ ತಬ್ಬಲಿಗಳನ್ನಾಗಿ ಮಾಡಲು ಸಾಧ್ಯ ಅಮ್ಮಿ... ನೀನು ಬೇಕು"2 ( ಎದೆಯ ಹಣತೆ -ಪುಟ -23) ಎನ್ನುವ ಮಾತುಗಳು ಮೆಹರುನ್ ಳನ್ನು ಬದುಕಿಸುವಂತೆ ಮಾಡುತ್ತದೆ. ಒಂದು ಸಂಬಂಧ ಒಪ್ಪಿಕೊಳ್ಳಲು ಪ್ರೇರೇಪಿಸುತ್ತದೆ,

ಇನ್ನೊಂದು ಸಂಬಂಧ ಮಕ್ಕಳಿಗಾಗಿ ಜೀವಿಸಲು ಹೇಳುತ್ತದೆ. ಮಕ್ಕಳ ಭವಿಷ್ಯತ್ತಿಗಾಗಿ ಅವಳ ಎದೆಯಲ್ಲಿ ಪ್ರಖರವಾದ ದೀಪ ಉರಿಯದಿದ್ದರೂ ಮಂದವಾಗಿ ದೀಪ ಬೆಳಗಲು ಪ್ರಾರಂಭಿಸಿತು.

ಹೀಗೆ ಕುಟುಂಬ ಸಮಾಜ ಮಹಿಳೆಯರನ್ನು ಉತ್ಪಾದಕ ವಸ್ತುವಿನಂತೆ ಕಂಡು ಅವಳ ಮೇಲೆ ಅಧಿಕಾರ ನಡೆಸುತ್ತಾ ಬಂದಿದೆ. ಮೆಹರುನಾಳ ಸಂಘರ್ಷ ವೈಯಕ್ತಿಕವಾದರೂ ಸಮಾಜದ ಆರ್ಥಿಕ ವರ್ಗೀಯ ರಚನೆಯಲ್ಲಿದೆ. ಇಲ್ಲಿ ಎಲ್ಲ ಕಥೆಗಳಲ್ಲಿಯೂ ಸ್ತ್ರೀ ಶ್ರಮ, ದೈಹಿಕ ಮಾನಸಿಕವಾಗಿ ಅದೃಶ್ಯವಾಗಿದೆ ಎಂಬುದನ್ನು ಎದೆಯ ಹಣತೆ ಕಥೆ ಎತ್ತಿ ಹೇಳುತ್ತದೆ.

**ಅಸ್ತಿತ್ವ-ಅಸ್ಮಿತೆಗಾಗಿ ನೋವುಗಳು:**

'ಎದೆಯ ಹಣತೆಯ' ಕಥೆ ಹೊರತು ಪಡಿಸಿ ಉಳಿದ ಎಲ್ಲ ಕಥೆಗಳಲ್ಲಿ ಬರುವ ಮಹಿಳೆಯರು ಹೆಚ್ಚಾಗಿ ಮಹತ್ವಾಕಾಂಕ್ಷೆಯಿಂದ ಬಹು ದೂರ ಇದ್ದು, ಇದೇ ರೀತಿ ಬದುಕಬೇಕೆಂಬ ಗುರಿ ಹೊಂದಿದವರಾಗಲಿ, ಸಿದ್ಧ ಮಾದರಿಯಲ್ಲಿ ಗುರುತಿಸಿಕೊಳ್ಳುವುದರಲ್ಲಿ ಸೀಮಿತವಾಗಿಲ್ಲ. ಕೇವಲ ಕುಟುಂಬ ವ್ಯವಸ್ಥೆಯಲ್ಲಿ ತಮ್ಮ ಇರುವಿಕೆಗಾಗಿ ಈ ಕೆಳಗಿನ ವಿಷಯಗಳ ಜೊತೆ ಸಂಘರ್ಷ ನಡೆದಿದೆ.

- ಆತ್ಮ ಸನ್ಮಾನಕ್ಕಾಗಿ ಸಂಘರ್ಷ
- ತಮ್ಮ ಧ್ವನಿಗೆ ಪ್ರಾಧಾನ್ಯತೆ ಕೊಡದಿರುವುದು
- ಬದುಕಿನ ಪ್ರತಿ ಹಂತದಲ್ಲೂ ಸಮಾಜ-ಸಮುದಾಯ-ಧರ್ಮಗಳೊಂದಿಗೆ ಸಂಘರ್ಷ

ಇಂತಹ ಹಲವು ಅಂಶಗಳಲ್ಲಿ ಮಹಿಳೆಯರ ಅನುಭವ ಲೋಕದಿಂದ ಅವರ ಅಸ್ತಿತ್ವದ ಶೋಧ ನಡೆಸಲಾಗಿದೆ.

ಪ್ರತಿ ವ್ಯಕ್ತಿಗೂ ಆತ್ಮ ಸನ್ಮಾನ ಎಂಬುವುದು ಬಹುದೊಡ್ಡ ಪ್ರಶಸ್ತಿ. ಇಂತಹ ವಿದ್ಯಮಾನಗಳಿಗೆ ಮಹಿಳೆಯರು ಭಾಜನರಾಗದಿರುವುದೇ ಸ್ವಸ್ಥ ಸಮಾಜಕ್ಕೆ ತುಂಬಾ ಅಪಾಯದ ಸ್ಥಿತಿ. ಇಂತಹ ಅಪಾಯದ ಸ್ಥಿತಿಗಳಿಗೆ ಧರ್ಮದ ರೀತಿ ರಿವಾಜುಗಳು, ಧರ್ಮ ಆಚರಣೆಯ ಅಜ್ಞಾನ, ಅಂಧ ಸಂಪ್ರದಾಯಿಗಳ ಯಜಮಾನಿಕೆಗಳಿಂದ ಮಹಿಳೆಯರ ಆತ್ಮ ಸನ್ಮಾನವು ಕನಸಿನ ಮಾತಾಗಿದೆ. ಆದಾಗ್ಯೂ 'ಎದೆಯ ಹಣತೆ ' ಮೆಹರುನ್, 'ಹೈ ಹೀಲ್ಡ್ ಷೂ'ದ ಆರೀಫ್ ಹಾಗೂ ನಸೀಮ 'ನಮ್ಮೊಳಗಿನ ಜರೀನಾ' ದ ಜರೀನಾ ಮತ್ತು ಸುಮತಿ ಮುಂತಾದವರು ಆತ್ಮ ಸನ್ಮಾನದ ಯಾತ್ರೆಗಾಗಿ ಪಯಣಿಸಿದವರು. ಜರೀನಾ ಮತ್ತು ನಸೀಮರಿಗೆ ಈ ಪಯಣದಲ್ಲಿ ಸುಖಾಂತ್ಯ ಅನುಭವಿಸಿದರೂ, ಮೆಹರುನ್ ಮತ್ತು ಆಕೆಯ ಹೆಣ್ಣು ಸಂಬಂಧಗಳಿಗೆ ಮೆಹರುನ್‌ಳ ಒಡಲ ಸಂಕಟದ ವೇದನೆ ಅರಿತಿದ್ದರೂ, ಅವರ ಧ್ವನಿಗೆ ಪ್ರಾಧಾನ್ಯತೆ ದೊರೆಯುವುದರಿಂದ ಮೌನಿಗಳಾಗಿ ಉಳಿಯುತ್ತಾರೆ. ಒಟ್ಟಿಗೆ ಹೆಣ್ಣು ಮಗಳು ತಮ್ಮ ಬದುಕಿನ ಪ್ರತಿ ಹಂತದಲ್ಲಿ ಸಮಾಜ-ಧರ್ಮದೊಂದಿಗೆ ಹೊಂದಾಣಿಕೆ ಮಾಡಿಕೊಂಡು; ಒಲ್ಲದ ಮನಸ್ಸಿನಿಂದ ನೋವು-ನಿರಾಸೆಗಳ ಸರಮಾಲೆ ಧರಿಸಿಕೊಂಡು, ಬದುಕಿನ ಯಾತ್ರೆಯಲ್ಲಿ ಸಹಪಯಣಿಗಳಾಗಿ ಪಯಣಿಸುವುದು ಅನಿವಾರ್ಯತೆ ಸೃಷ್ಟಿಗೊಂಡಿದ್ದು ಹೆಣ್ಣಿನ ಬದುಕಿಗೆ ವಿಪರ್ಯಾಸವೇ ಸರಿ. ಬಾನು ಅವರ ತಮ್ಮ ಕಥೆಗಳಲ್ಲಿ ಇಂತಹ ಹಲವು ವಿಷಯಗಳನ್ನು ವ್ಯಕ್ತಪಡಿಸಿದ್ದಾರೆ.

ಭಾರತೀಯ ಕೌಟುಂಬಿಕ ವ್ಯವಸ್ಥೆಯಲ್ಲಿ ಕುಟುಂಬದ ಪ್ರಗತಿಗಾಗಿ, ಕುಟುಂಬ ಸ್ವಾಸ್ಥ್ಯಕ್ಕಾಗಿ ಸತಿ ಪತಿಗಳೆಂಬ ಎರಡು ತತ್ವಗಳು ಸಮಾನ ಚೇತಕಗಳಾಗಿ ಸಾತ್ವಿಕ

ನಿರ್ವಾಹಕರಾಗಿ, ತಮ್ಮ ತಮ್ಮ ಕಾರ್ಯ ನಿರ್ವಹಿಸುವಲ್ಲಿ ಕ್ರಿಯಾಶೀಲರಾಗಿರಬೇಕು ಹೊರತು ಶ್ರೇಣಿಕರಣದ ಹುಸಿ ಬಯಕೆಗಳು, ಹೊಣೆಗಾರಿಕೆಯ ಪಲಾಯನದ ಕಸರತ್ತುಗಳು, ಮೋಜು ಮಸ್ತಿಗಳಲ್ಲಿ ತಲ್ಲೀನತೆ ಹಾಗೂ ಬೇಜವಾಬ್ದಾರಿ ವರ್ತನೆಗಳಿಂದಾಗಿ ದಾಂಪತ್ಯವು ಕೀಲು ತಪ್ಪಿದ ಚಕ್ಕಡಿಯಂತಾಗುತ್ತದೆ. ಜವಾಬ್ದಾರಿಗಳನ್ನು ಕರ್ತವ್ಯಗಳನ್ನು ಗಂಡ-ಹೆಂಡತಿಯರು ಸಮಾನವಾಗಿ ನಿರ್ವಹಿಸದಿದ್ದರೆ 'ಸಂಸಾರದ ಗುಟ್ಟು ವ್ಯಾಧಿ ರಟ್ಟು' ಎನ್ನುವಂತೆ ಜಗಜಾಹಿರವಾಗಿ ದಾಂಪತ್ಯ ಛಿದ್ರೀಕರಣವಾಗುತ್ತದೆನ್ನುವುದಕ್ಕೆ 'ನಮ್ಮೊಳಗಿನ ಜರೀನಾ' ಸಾಕ್ಷಿಯಾಗುತ್ತದೆ. ಪ್ರಸ್ತುತ ಕಥೆಯಲ್ಲಿ ಹೆಣ್ಣಿನ ಆತ್ಮಾಭಿಮಾನ ಮತ್ತು ಸ್ವಾಭಿಮಾನಕ್ಕೆ ಮೇಲಿಂದ ಮೇಲೆ ಪೆಟ್ಟು ಕೊಡುತ್ತಿರುವ ಗಂಡಿನ ವರ್ತನೆಗಳಿಂದಾಗಿ ಉದ್ಯೋಗಸ್ಥ ಮಹಿಳೆಯರು ಮಾನಸಿಕ ದೈಹಿಕ ಹಿಂಸೆಗಳ ಅನುಭವಿಸಿರುವ ಚಿತ್ರಣ ಕಂಡು ಬಂದಿದೆ. ಈ ಕಥೆಯ ಜರೀನಾ ಮತ್ತು ಸುಮತಿಯರು ಉದ್ಯೋಗಸ್ಥ ಮಹಿಳೆಯರು. ವಕೀಲ ವೃತ್ತಿಯ ಸುಮತಿ ಅತ್ಯಂತ ಜಾಣ್ಮೆ-ಕೌಶಲ್ಯಗಳಿಂದ ಇಂಗ್ಲೀಷ್ ಭಾಷೆಯಲ್ಲಿ ವ್ಯವಹರಿಸುತ್ತಿದ್ದ ಮಹಿಳೆ. ಈ ಕಾರಣದಿಂದ ಆಕೆಯ ಗಂಡ ಮೋಹನನ ಮತ್ಸರಕ್ಕೆ ಬಲಿಯಾಗಿ ನಿತ್ಯ ಆತನ ವ್ಯಂಗ್ಯ ತಿರಸ್ಕಾರದ ನುಡಿಗಳಿಂದ ಬೇಸತ್ತರೂ ಸಹನೆಯಿಂದ ಉತ್ತರಿಸುತ್ತಿದ್ದಳು. ಆದರೆ ಜರೀನಾ ಗಾರ್ಮೆಂಟ್ಸ್ ಫ್ಯಾಕ್ಟರಿಯ ಉದ್ಯೋಗಸ್ಥೆ. ಓ.ಟಿ ಮಾಡಿ ತನ್ನ ಗಂಡ ಮಕ್ಕಳಿರುವ ಕುಟುಂಬ ನಿರ್ವಹಿಸುತ್ತಿದ್ದಳು. ಆಕೆ ಗಂಡ ಹೆಂಡತಿ ಮೇಲೆ ಸದಾ ಅನುಮಾನ ಮಾಡುವ ವ್ಯಕ್ತಿ. ಪ್ರತಿ ದಿನ ಆತ ನೀಡುವ ಮಾನಸಿಕ ಕಿರುಕುಳಗಳಿಗೆ ಆತನ ವರ್ತನೆಗಳಿಗೆ ತಿಲಾಂಜಲಿ ನೀಡಿ ಆತನಿಂದ ಬಿಡುಗಡೆ ಹೊಂದಿ ತನ್ನ ಆತ್ಮ ಸನ್ಮಾನದ ದಾರಿ ಆಯ್ದುಕೊಳ್ಳುತ್ತಾಳೆ. ಸುಮತಿಯ ಕ್ಲೈಂಟ್ ಜರೀನಾಗೆ ಸಂಸಾರ ಗುಟ್ಟು ವ್ಯಾಧಿ ರಟ್ಟಾದರೂ ಸರಿ ಆತ್ಮಾಭಿಮಾನಕ್ಕೆ ಬೀಳುವ ಪೆಟ್ಟನ್ನು ಸಹಿಸದ ಮಹಿಳೆ. ಜರೀನಾಳಲ್ಲಿ ಹುಂಬುತನವಿದ್ದರೂ ಕ್ರೌರ್ಯದ ಬಂಧನದಿಂದ ವಿಮೋಚನೆ ಹೊಂದಿ ಆನಂದಭರಿತ ಜೀವನ ಸಾಗಿಸಬೇಕೆಂಬ ಆಶಯ ಹೊಂದಿದ್ದಾಳೆ. ಜರೀನಾಳ ದಿಟ್ಟ ನಿಲುವು, ಆಕೆ ಕೈಗೊಂಡ ನಿರ್ಧಾರಗಳು ಸುಮತಿಯಲ್ಲಿ ಆತ್ಮ ವಿಮರ್ಶೆಗೆ ಹಚ್ಚುತ್ತದೆ. ನೂರಾರು ಕ್ರೌರ್ಯಗಳಿಂದ ನರಳುವ ಮಹಿಳೆಯರಲ್ಲಿಯೂ ಜರೀನಾಳಂತಹ ಮನಸ್ಥಿತಿ ಇರುತ್ತದೆ. ಆದರೆ ಹಲವು ಭಾವ ಬಂಧನಗಳಲ್ಲಿ ಬಂಧಿತಳಾಗುತ್ತಾಳೆ.

'ಎದೆಯ ಹಣತೆಯ' ಮೆಹರುನ್ ಸಹ ವಿದ್ಯಾವಂತೆ. ಆಕೆ ತನ್ನ ವಿದ್ಯಾಭ್ಯಾಸಕ್ಕಾಗಿ ತವರಿನಲ್ಲಿ ಪ್ರತಿರೋಧಿಸಿದರೂ ವಿವಾಹ ಮಾಡುತ್ತಾರೆ. ತಾನು ಅಂದುಕೊಂಡ ಸಂಗಾತಿ ಮತ್ತು ಜೀವನ ದೊರೆಯದಿದ್ದಾಗ ಆಕೆ ಪ್ರತಿರೋಧಕ್ಕೆ ಮಹತ್ವ ಸಿಗುವುದಿಲ್ಲ. ಅಸಹನೆಯ ಬೆಂಕಿಯಲ್ಲಿ ಬೆಂದು ಬಳಲಿದ ಮೆಹರುನ್ ತನ್ನ ಕರುಳಿನ ಕುಡಿಗಳಿಗಾಗಿ ತನ್ನ ಜೀವನ ಕಟ್ಟಿಕೊಳ್ಳಬೇಕೆಂಬ ಉತ್ಸಾಹ ಮೂಡುತ್ತದೆ.

'ಹೈ ಹೀಲ್ಡ್ ಷೂ' ದ ಆರೀಫ್ ಮತ್ತು ಆತನ ಹೆಂಡತಿ ನಸೀಮಾ ಇವರು ವಿದ್ಯಾವಂತರು. ಈತನ ಸಹೋದರ ನವಾಜ್ ಅವಿವೇಕಿಯಾದರೂ ಅಣ್ಣನ ದುಡ್ಡಿನಲ್ಲಿ ತನ್ನ ಅಸ್ತಿತ್ವ ಕಟ್ಟಿಕೊಳ್ಳುವ ಶೋಕಿ ಹೊಂದಿದ ವ್ಯಕ್ತಿ. ಈ ಕಥೆಯಲ್ಲಿ ಎರಡು ರೀತಿ ಅಸ್ತಿತ್ವದ ಅಸ್ಮಿತೆಯ ಉಳಿವಿಗಾಗಿ ನೋವುಗಳ ಚಹರೆಗಳಿವೆ. ಸೌದಿಯಲ್ಲಿ ಕೆಲಸ ಮಾಡುತ್ತಿದ್ದ ಆರೀಫ್ ಮತ್ತು ಆತನ ಹೆಂಡತಿ ನಸೀಮಾ ತಮ್ಮ ಅಸ್ತಿತ್ವ ಕಟ್ಟಿಕೊಂಡವರು. ಆದರೆ ತಮ್ಮ ಹಳ್ಳಿ ಬದುಕಿನ ಅಸ್ತಿತ್ವ ಹಾಗೂ ಬಾಲ್ಯದ ನೆನಪುಗಳನ್ನು ಉಳಿಸಿಕೊಳ್ಳದ ನೋವು ತನ್ನ ಸಹೋದರನ ದೆಸೆಯಿಂದ ಅನುಭವಿಸುತ್ತಿದ್ದಾನೆ. ಇತ್ತ ನವಾಜ್ ತನ್ನ ಸಹೋದರ ಕಳುಹಿಸುತ್ತಿದ್ದ ದುಡ್ಡಿನಿಂದ ಶೋಕಿ ಮಾಡುತ್ತ ಊರಲ್ಲಿ ತನ್ನ ವರ್ಚಸ್ಸಿಗಾಗಿ ಹಿರಿಯರ ಮನೆ ನಿರ್ನಾಮ ಮಾಡಿ ಭವ್ಯ ಮಹಲು ಕಟ್ಟಿಸಿ ಅಣ್ಣನ ಅಸಮಾಧಾನಕ್ಕೆ ಕಾರಣನಾಗುತ್ತಾನೆ.

ಇಂತಹ ಎಲ್ಲ ಶೋಕಿಗಳ ನಡುವೆಯೂ ತನ್ನ ಗರ್ಭಿಣಿ ಹೆಂಡತಿಗೆ ಆರೈಕೆ ಮಾಡದ ವ್ಯಕ್ತಿ. ಅಷ್ಟೆ ಅಲ್ಲದೆ ಗರ್ಭಿಣಿ ಹೆಂಡತಿಗೆ ತನ್ನ ಅತ್ತಿಗೆಯಂತೆ ಆಕೆಯ ಪಾದಗಳಿಗೆ ಸರಿಹೊಂದದ ಹೈ ಹೀಲ್ಡ್ ಷೂ ಹಾಕಿಸಿದ ಅವಿವೇಕಿ. ತಾನು ಹಾಕಿದ ಹೈ ಹೀಲ್ಡ್ ಷೂಯಿಂದ ಅನೇಕ ಕಿರುಕುಳ ಅನುಭವಿಸಿದ ಬಸುರಿ ಹೆಣ್ಣು ಮಗಳ ನೋವುಗಳು ನವಾಜ್‌ಗೆ ಪ್ರಧಾನ ಆಗುವುದಿಲ್ಲ ಹೊರತು ಆಧುನಿಕ ಶೋಕಿ ಬದುಕಿಗೆ ಜೋತು ಬೀಳಲು ಆತನಿಗೆ ಸಮಾಜದಲ್ಲಿ ಸಿಗುವ ಪ್ರಸ್ಟೀಜ್ ನ ಅಸ್ತಿತ್ವ ಮುಖ್ಯ ಆಗುತ್ತದೆ. ಕೊನೆಗೆ ಬಸುರಿ ನವಾಜ್ ನ ಹೆಂಡತಿ ತನ್ನ ಕರುಳಿನ ಕುಡಿಗೆ ಕುತ್ತು ಬರುವ ಸೂಚನೆ ಕಂಡು ತನ್ನೆಲ್ಲಾ ಶಕ್ತಿ ಹಾಕಿ ತಾನು ಧರಿಸಿದ ಹೈ ಹೀಲ್ಡ್ ಷೂ ಕಿತ್ತೆಸೆಯುತ್ತಾಳೆ. ಇಲ್ಲಿ ಬಸುರಿಯ ನೋವಿನ ಧ್ವನಿ ಪ್ರಮುಖ ಆಗುವುದಿಲ್ಲ.

**ಸತ್ಯದ ಅನಿಶ್ಚಿತತೆ ( ಒಂದೇ ಸತ್ಯದ ಹಲವು ಮುಖಗಳು):**

ಸತ್ಯ ಎಂಬ ಮೌಲ್ಯವು ಆಧುನಿಕೋತ್ತರ ಸಂದರ್ಭದಲ್ಲಿ ಹಲವು ಅರ್ಥಗಳನ್ನು ಪಡೆಯುತ್ತಿದೆ. ಧರ್ಮ, ಪರಿಸರ ಸಂದರ್ಭ–ಸನ್ನಿವೇಶಗಳಿಂದಾಗಿ ಒಂದೇ ಸತ್ಯ ಹಲವಾರು ಭಿನ್ನ ಅನುಭವ ಆಧಾರಗಳಿಂದ ಹಲವಾರು ಅರ್ಥಗಳನ್ನು ಬಿಂಬಿಸುತ್ತವೆ. ಇಂತಹ ಬಹುಮುಖ ಸತ್ಯದ ತತ್ವಗಳೇ ಆಧುನಿಕೋತ್ತರ ಸಾಹಿತ್ಯದ ಮಹತ್ವದ ಅಂಶವಾಗಿದೆ. ವೈವಿಧ್ಯಮಯ ಜೀವನಕ್ರಮ, ಅಲ್ಲಿಯ ಕಷ್ಟದ ಸಾಂದ್ರತೆಗಳು, ವಿಭಿನ್ನ ಅನುಭವಗಳು, ಹತ್ತು ಹಲವಾರು ಸಮಸ್ಯೆಗಳ ವಿರುದ್ಧ ಪ್ರಶ್ನೆ ಪ್ರತಿರೋಧಿಸುತ್ತದೆ ಹೊರತು ನೈತಿಕ ನಿರ್ಣಯ ನೀಡುವದಿಲ್ಲ.

'ಎದೆಯ ಹಣತೆ' ಕಥಾ ಸಂಕಲನದ ಎಲ್ಲಾ ಕಥೆಗಳು ದಾಂಪತ್ಯದ ಜೀವನಕ್ರಮಗಳನ್ನು ವೈವಿಧ್ಯಮಯವಾಗಿ ಚಿತ್ರಿಸಿದೆ. ದಾಂಪತ್ಯದ ಸೊಗಸು ಕುಟುಂಬ ಸ್ವಾಸ್ಥ್ಯವನ್ನು ಕಟ್ಟಿಕೊಡುತ್ತದೆ. ಈ ಸತ್ಯ ಬೇರೆ ಬೇರೆ ಜೀವನಕ್ರಮ, ವಿಭಿನ್ನ ವರ್ಗಗಳ ಹಾಗೂ ವಿಭಿನ್ನ ಪರಿಸರಗಳಲ್ಲಿ ದಾಂಪತ್ಯದ ಸಂಘರ್ಷದಲ್ಲಿ ಹೆಣ್ಣು ಹೈರಾಣದ ಸ್ಥಿತಿಗಳನ್ನು ಅಭಿವ್ಯಕ್ತಿಸುತ್ತವೆ. ಕುಟುಂಬದ ಹೊಣೆ, ಸ್ವಾಸ್ಥ್ಯ, ರಕ್ಷಣೆ, ಭದ್ರತೆ, ಲಾಲನೆ ಪೋಷಣೆಗಳೆಲ್ಲವೂ ಹೆಣ್ಣಿನ ಮೇಲೆ ಹೇರಿದೆ. ಹೆಣ್ಣು ಮಗಳನ್ನು ಗಂಡಿನ ಭೋಗದ ವಸ್ತುವನ್ನಾಗಿ ಮಾಡಿದೆ. ಎಲ್ಲ ಕಥೆಗಳಲ್ಲಿ ಗಂಡಿನ ವರ್ತನೆಗಳಲ್ಲಿ ಮಾನವೀಯತೆ ಸ್ಪುರಣೆ ಎದ್ದು ಕಾಣುವುದಿಲ್ಲ. ಹೀಗೆ ದಾಂಪತ್ಯದಲ್ಲಿ ಮಾನವೀಯತೆ ಪ್ರೀತಿ ಕರುಣೆಗಳು ಮುಖಾಮುಖಿಯಾಗಬೇಕು. ಆದರೆ ಮಾನವೀಯ ಸಂಬಂಧಗಳ ಮೆಟ್ಟಿ ನಿಲ್ಲುವ ಅನಿವಾರ್ಯತೆ ಎದೆ ಹಣತೆ ಕಥೆಯಲ್ಲಿ ವ್ಯಕ್ತವಾಗಿದೆ. ಏಕೆಂದರೆ ಮೆಹರುನ್ ಪತಿಯ ಅನೈತಿಕ ಸಂಬಂಧ ಸಹಿಸದ ಮಹಿಳೆ. ಆತನ ವರ್ತನೆ ವಿರೋಧಿಸಿದರು ತವರಿನ ಬಾಗಿಲಿಗೆ ಬಂದರೂ ಆಕೆ ಸಂಕಟಕ್ಕೆ ಸಾಂತ್ವನ ಹೇಳದಿರುವ ರಕ್ತ ಸಂಬಂಧಿಗಳು ಒಂದು ಕಡೆಯಾದರೆ ಮತ್ತೊಂದೆಡೆ 'ಜೀವಸೆಲೆ'ಯ ಅಬಿದಾಳಿಗೆ ಬಡತನವಿದ್ದರು ದಾಂಪತ್ಯದ ಜೀವನದಲ್ಲಿ ಪ್ರೀತಿ ಎಂಬ ಪರಿಯಲಿ ಗಂಡನ ಆಕ್ರಮಣವನ್ನು ಸಹನೆಯಿಂದ ಎದುರಿಸಿದರು ಅವರಲ್ಲಿ ಸಂತೋಷವಿತ್ತು. ಆದರೆ ಆ ಬಂಧನಯುಕ್ತ ಜೀವನವೇ ಆಕೆಗೆ ಮುಳುವಾಯಿತು. ತನ್ನ ಗಂಡನ ಸಾವಿನ ನಂತರ ಆಕೆ ಕಾಮುಕ ಗಂಡಸರ ಕೆಟ್ಟ ದೃಷ್ಟಿಗೆ ಬಿದ್ದು, ಭೋಗದ ವಸ್ತುವಿನಂತೆ ಕಾಣುವ ಅಪಾಯಕ್ಕೆ ಸಿಲುಕುತ್ತಾಳೆ. 'ನಮ್ಮೊಳಗಿನ ಜರೀನಾ' ದ ಜರೀನಾ ಮತ್ತು ಸುಮತಿಯರು ಉದ್ಯೋಗಸ್ಥ ಮಹಿಳೆಯರು. ಆರ್ಥಿಕವಾಗಿ ಸ್ವಾವಲಂಬಿಗಳಾಗಿದ್ದರೂ ಕುಟುಂಬ ಹೊಣೆ ಹೊತ್ತವರಾದರೂ ತಮ್ಮ ಗಂಡಂದಿರ ಈರ್ಷೆ ಮತ್ಸರಕ್ಕೆ ಗುರಿಯಾಗಿದ್ದರು. ತಮ್ಮ ಯಜಮಾನಿಕೆಯಿಂದ ಹೆಣ್ಣನ್ನು ಅಧೀನತೆಯಲ್ಲಿಟ್ಟು ದಾಸ್ಯತ್ವದ ಸೇವೆಗಳಿಂದ ತಾವುಗಳು ವಂಚಿತರಾಗುತ್ತಿರುವ ಅಳುಕಿನಿಂದ ತಮ್ಮ ಪತ್ನಿಯರನ್ನು ಅನುಮಾನದಿಂದ ನೋಡುತ್ತಿರುವ ವ್ಯಕ್ತಿಗಳಿಂದ ಜರೀನಾ ಮುಕ್ತಿ ಪಡೆದರೆ ಸುಮತಿ ತನ್ನ

ಗಂಡನ ಕುಹಕದ ಮಾತುಗಳಿಗೆ ಸಹಿಸಿಕೊಂಡು ಜೀವನ ಮಾಡುತ್ತಾಳೆ.

ಹೀಗೆ ಮುಸ್ಲಿಂ ಸಮುದಾಯದಲ್ಲಿಯ ಚಾಲ್ತಿಯಲ್ಲಿದ್ದ ಘೋಷಾ ಪದ್ಧತಿ, ಬಹುಸಂತಾನ, ಬಹುಪತ್ನಿತ್ವಗಳಿಂದಾಗಿ ದಾಂಪತ್ಯ ಜೀವನದಲ್ಲಿ ಮಹಿಳೆಯರು ನೂರಾರು ನೋವುಗಳನ್ನ, ಸಂಕಟಗಳನ್ನ, ಕಷ್ಟ ಕಾರ್ಪಣ್ಯಗಳನ್ನು ಅನುಭವಿಸಿದ ರೀತಿಗಳು ಹೃದಯ ವಿದ್ರಾವಕವಾಗಿ ಚಿತ್ರಿತಗೊಂಡಿದೆ. ಒಂದೇ ಸತ್ಯ ಒಂದೇ ಘಟನೆಗಳು ನೂರಾರು ಅನುಭವಗಳು, ಅರ್ಥಗಳು ಏಕ ಕಾಲದಲ್ಲಿ ಹೊರಹೊಮ್ಮಿವೆ.

ಹೀಗೆ 'ಎದೆ ಹಣತೆ' ಕಥಾ ಸಂಕಲನವು ಆಧುನಿಕೋತ್ತರ ಸಮಸ್ಯೆಗಳ ಚಿಂತನೆಯನ್ನು ಸಮಗ್ರವಾಗಿ ಅಭಿವ್ಯಕ್ತಿಸುತ್ತದೆ. ಮುಸ್ಲಿಂ ಸಮುದಾಯದ ಧರ್ಮದ ಆಚರಣೆಯ ಅವೈಜ್ಞಾನಿಕತೆಯ ಅಂಶಗಳ ಕುರಿತು ಚಿಂತಿಸುತ್ತದೆ. ಮೂಲಭೂತವಾದಿಗಳ ವರ್ತನೆಯನ್ನು ಖಂಡಿಸುತ್ತದೆ. ಅಂಧ ಸಂಪ್ರದಾಯವಾದಿಗಳನ್ನು ಪ್ರಶ್ನಿಸುತ್ತದೆ. ಕೆಳಸ್ತರ ಮಹಿಳೆಯರ ಆರ್ತಧ್ವನಿ ಗುರುತಿಸಿ ಅವರ ಅಸ್ತಿತ್ವಕ್ಕಾಗಿ ಆತ್ಮ ಸನ್ಮಾನದ ಮಾರ್ಗ ರೂಪಿಸಿಕೊಳ್ಳಲು ಒತ್ತಾಯಿಸುತ್ತದೆ. ಆಧುನಿಕೋತ್ತರ ಸಾಹಿತ್ಯದ ಮಹತ್ವದ ತತ್ವವಾದ ಸತ್ಯದ ವಿವಿಧ ಅನುಭವಲೋಕವನ್ನ ಪರಿಚಯಿಸಲಾಗಿದೆ. ಕಥೆಗಳ ನಿರೂಪಣಾ ಶೈಲಿ ಅತ್ಯಂತ ಆಕರ್ಷಕವಾಗಿದ್ದು ಓದುಗರಿಗೆ ಆಪ್ತವಾಗಿದೆ. ಕಥೆ ರಚನೆಗಳಲ್ಲಿ ಪ್ರಯೋಗಾತ್ಮಕತೆ ತೋರಿಸಿದ್ದು ಬಾನು ಮುಸ್ತಾಕ್ ಅವರ ಕಥೆಗಳಿಗೆ ವಿಶಿಷ್ಠ ಸ್ಥಾನ ದೊರೆತಿದೆ. ಈ ಕಥಾ ಸಂಕಲನವನ್ನು ಹಲವು ದೃಷ್ಟಿಕೋನದಿಂದ ಅಧ್ಯಯನಕ್ಕೊಳಪಡಿಸಬಹುದು.

**ಪರಾಮರ್ಶನ ಗ್ರಂಥಗಳು:**

1. ಬಾನು ಮುಸ್ತಾಕ್, (2004), ಎದೆಯ ಹಣತೆ, ಬೆಂಗಳೂರು: ಸಿವಿಜಿ ಪಬ್ಲಿಕೇಷನ್.
2. ಶೇಖರ್ ಎಸ್. ವಿ., (2005), ಕನ್ನಡ ಕಥಾ ಸಾಹಿತ್ಯದ ಪ್ರವೃತ್ತಿಗಳು, ಮೈಸೂರು: ಪ್ರಜ್ಞಾ ಪ್ರಕಾಶನ.
3. ಡಾ. ಸವಿತಾ ಕೊಟಬಾಗಿ, (2010), ಕನ್ನಡ ಸಾಹಿತ್ಯ: ಮುಸ್ಲಿಂ ಸಂವೇದನೆ, ಹುಬ್ಬಳ್ಳಿ: ಆತ್ಮಶ್ರೀ ಪ್ರಕಾಶನ.
4. ನರಸಿಂಹಮೂರ್ತಿ ಕೆ.ವಿ., (2008), ಸಮಕಾಲೀನ ಕನ್ನಡ ಸಾಹಿತ್ಯ, ಧಾರವಾಡ: ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ.

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.